'ಇದಕ್ಕೆ ಪರಿಹಾರ?'

'ನೀವೆಲ್ಲರೂ ಇಲ್ಲಿಂದ ಎದ್ದು ಹೋಗುವುದೊಂದೆ' ಎನ್ನಬೇಕೆಂದಳು. ಸುಮ್ಮನಾದಳು. ಅವಳು ಕುಂತ ಹಿಂದುಗಡೆಯ ಶೋಕೇಸಿನಲ್ಲಿ ತರತರಹದ ಪ್ರಶಸ್ತಿ ಪತ್ರಗಳು, ಬಿನ್ನವತ್ತಳೆಗಳು ಸಾಧನೆಯ ಮಾಪನಗಳು, ರಾಷ್ಟ್ರಪತಿಗಳಿಂದ, ಮುಖ್ಯಮಂತ್ರಿಗಳಿಂದ ಪ್ರಶಸ್ತಿ ಪಡೆದ ಚಿತ್ರಗಳು.

ಒಬ್ಬಳು ತದೇಕಚಿತ್ತದಿಂದ ಅದನ್ನೆ ನೋಡುತ್ತಿದ್ದಳು. 'ನಿಮ್ಮ ಸಾಧನೆ ದೊಡ್ಡದು ಮೇಡಮ್' ಎಂದಳು.

ಸುಮ್ಮನೆ ಬಲತ್ಕಾರದ ನಗು ನಕ್ಕಳು.

'ನೀವು ಪಡೆದಿರುವ ಪ್ರಶಸ್ತಿಗಳು ಫಲಕಗಳನ್ನು ನೋಡುತ್ತಿದ್ದರೆ ನಮಗೆ ಒಂದೇ ಒಂದು ಪ್ರಶಸ್ತಿ ಪಡೆಯಲಾರೆವು ಅನಿಸುತ್ತಿದೆ. ನಿಮ್ಮ ಈ ಹದಿನೇಳು ವರ್ಷದ ಸಾಧನೆಯಲ್ಲಿ ನಮ್ಮ ಸಂಸ್ಥೆಯನ್ನು ಈ ರೀತಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಟ್ಟಿ ಬೆಳಸಿದ್ದೀರಲ್ಲ! ಅದು ದೊಡ್ಡದು' ಎಂದಳು. ಆಫೀಸಿನಲ್ಲಿ ಬಾಲ ಮುಚ್ಚಿಕೊಂಡು ಓಡಾಡುವ ಇವರು ಇಲ್ಲಿ ನನಗೆ ಉಪದೇಶಕರಾಗಿದ್ದಾರೆ, ತಮ್ಮ ಹೊಗಳಿಕೆ ಎಂಬ ಹೂಬಾಣದಿಂದ ನನ್ನನ್ನು ಸಿಂಗರಿಸಲು ನೋಡುತ್ತಿದ್ದಾರೆ. ಇನ್ಸೆಂಟಿವ್, ಸ್ಯಾಲರಿ ಹೈಕ್‌ಗಳು ಇದರ ಹಿಂದೆ ಕೆಲಸ ಮಾಡುತ್ತಿರಬಹುದು ಎಂದುಕೊಂಡಳು.

ಚಹಾ ಮಾಡಿದ ಆ ಲಲನಾಂಗನೆಯರು ಇವಳ ಮುಂದೆ ಒಂದು ಕಪ್ ಇಟ್ಟು ಉಳಿದವರಿಗೆ ಹಂಚಿದರು. ಒಬ್ಬಳು, 'ಮೇಡಮ್ ನಿಮಗಾಗಿ ಗೋಡಂಬಿ ಮೆತ್ತಿದ ಬಿಸ್ಕೆಟ್ ತಂದಿದ್ದೇನೆ' ಎಂದು ತನ್ನ ಬ್ಯಾಗಿನಲ್ಲಿ ತಡಕಾಡಹತ್ತಿದಳು.

'ಇಲ್ಲ ನಾನು ಅದು ತಿನ್ನುವುದಿಲ್ಲ. ಗೋಡಂಬಿ ನನಗೆ ಅಲರ್ಜಿ' ಅಂದಳಿವಳು. ಈ ಹದಿನೇಳು ವರ್ಷದ ಕಟುಜೀವನವನ್ನು ಸಹಜವಾಗೇ ಕಟ್ಟಿದ್ದಲ್ಲ. ಅದು ಕೃತಕ ಕಟಾಂಜನ ಅನ್ನಿಸಿತು ಭೂಮಿಕಾಗೆ.

ಪೂರ್ವಾರ್ಧ ನೆನೆಸಲು ಆಗದ ಜೀವನವನ್ನು ಮೀರಲು ಘನವಾದರೆ ಈ ಘನ ಸ್ವಾಭಾವಿಕ ಕರ್ಮ-ಕ್ರಿಯೆಗಳಿಂದ ಆದುದ್ದಲ್ಲ. ಇದು ಒಂದು ಅಸಹಜ ಕಠೋರ ವಿಧಾನ.

ಎದುರಿಗೆ ಕೂಡ್ರಿಸಿಕೊಂಡು ಇಂತಹ ವಿಚಾರಗಳನ್ನು ಯೋಚಿಸುವುದು ಅಕ್ಷಮ್ಯವೆನಿಸಿತು.

ಆರು ಜನರು ಯಾವುದೋ ಉದಾಹರಣೆ ಯಾವುದೋ ಅಂಶಗಳನ್ನು ಹಿಡಿದು ಅವಳನ್ನು ಇಂಪ್ರೆಸ್ ಮಾಡಲು ನೋಡುತ್ತಿದ್ದರು.

'ನೀವು ನಿಮ್ಮ ಜೀವನದ ಬಗ್ಗೆ ಒಂದು ಪುಸ್ತಕ ಬರೆಯಬೇಕು. ಅದಕ್ಕೆ ದಿಗ್ವಿಜಯ ಎಂದು ಹೆಸರಿಡಬೇಕು. ಅದು ಮುಂದಿನ ಪೀಳಿಗೆಯ ಸಮಾಜಸೇವಾ ವಿದ್ಯಾರ್ಥಿಗಳಿಗೆ ಬೈಬಲ್‌ನಂತೆ ಆಗಬೇಕು'.

'ಈ ಬಂಜರು ಭೂಮಿಯಲ್ಲಿ ನಮ್ಮ ಸಂಸ್ಥೆ ಸಾಧಿಸಿದ್ದು ಇಲ್ಲಿಯ ಜನರಿಗೆ ಉಪಯೋಗ ಮಾಡಿದ್ದು ಕಡಿಮೆಯೇ? ಅದೆಲ್ಲವೂ ಆ ಪುಸ್ತಕದಲ್ಲಿ ದಾಖಲಿಸಬೇಕು'.

ತಲೆ ಚಿಟ್ಟು ಹಿಡಿದು, 'ಆಫೀಸಿನಲ್ಲಿ ಕೆಲಸವಿರಬೇಕಲ್ಲ ಪಾಪ. ನೀವಿಲ್ಲಿ ಬಂದು ನಿಮ್ಮ ಕೆಲಸಕ್ಕೆ ತೊಂದರೆಯಾಯಿತೇನೋ ' ಎಂದಳು.

ಎಲ್ಲರೂ ಎದ್ದು ನಿಂತು ಶುಭ ಹಾರೈಸಿದರು. 'ನಾವು ಹೋಗುತ್ತೇವೆ. ಬೇಗ ಈ ಡಿಪ್ರೆಶನ್ ಕಾಯಿಲೆಯಿಂದ ಹೊರಬನ್ನಿ' ಎಂದು ಹೊರಟರು.

ಅವರು ಹೋದ ತಕ್ಷಣವೇ ಭೂಮಿಕಾಗೆ ಗುಲಾಮ ರಾಷ್ಟ್ರವೊಂದು ಸ್ವಾತಂತ್ರ್ಯ ಗಳಿಸಿದಷ್ಟು ಸಂತಸವಾಯಿತು. ಡಬ್ಬೆಂದು ಬಾಗಿಲು ಹಾಕಿಕೊಂಡು ಹಾಗೇ ಸೋಫಾದ ಮೇಲೆ ಪವಡಿಸಿದಳು. ಅವರು ಹೇಳುವಾಗ ತನ್ನ ಪ್ರತಿಕ್ರಿಯೆ ಯಾಕೆ ಗೌಣವಾಗಿತ್ತು? ಪ್ರಶ್ನಿಸಿಕೊಂಡಳು.

ಪುಸ್ತಕ ಬರೆಯಬೇಕು, ದಿಗ್ವಿಜಯ ಎಂದು ಹೆಸರಿಡಬೇಕು. ಅದು ಮುಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಸಮಾಜಸೇವಾ ಬೈಬಲ್‌ನಂತೆ ಆಗಬೇಕು ಎಂದು ಅವರು ಹೇಳುವಾಗ ನಮ್ಮ ಇತಿಹಾಸಗಳು ಹೇಗೆ ಕುರೂಪಗೊಳ್ಳುತ್ತವೆ ಎಂದು ಚಿಂತಿಸಿದಳು.

ಹದಿನೇಳು ವರ್ಷದಾಚೆಗಿನ ಇತಿಹಾಸವನ್ನು ಬರೆಯದೆ ಮುಂದಿನ ಇತಿಹಾಸ ಬರೆಯಲು ನನಗಾವ ಹಕ್ಕಿದೆ. ಮನುಷ್ಯನ ಇತಿಹಾಸವೆಲ್ಲವೂ ಈ ಧಾಟಿಯಲ್ಲಿರಬಹುದು. ಅಂದರೆ ಸುಳ್ಳು ಸೃಷ್ಟಿಯ ಜಗತ್ತಿನಲ್ಲಿ ನಾನು ಅದನ್ನೇ ಹಾಡುತ್ತಿರುವ ಗುಂಗಾಡಿ ಇರಬಹುದು ಎಂದುಕೊಂಡು ಹಾಸಿಗೆಗೆ ಕಾಲುಚಾಚಿ ಪಾದವನ್ನು ಮೇಲೆ ಕೆಳಗೆ ಮಾಡಿದಳು. ಅವನು